Non-availability of fertilizers

ಶ್ರೀ ಎಚ್. ಡಿ. ದೇವೇಗೌಡ —ಅಧ್ಯಕ್ಷರ ಜೊತೆ ಸಹಕರಿಸಬೇಕಾದುದು ನಮ್ಮ ಜವಾಬ್ದಾರಿ ಇದೆ. ಅದು ನನಗೂ ಗೊತ್ತಿದೆ. ಆದರೆ ಇಡೀ ರಾಜ್ಯಕ್ಕೇ ಸಂಬಂಧಪಟ್ಟಂತಹ ವಿಚಾರವಾದುದರಿಂದ ಮುಖ್ಯ ಮಂತ್ರಿಗಳು ಇಲ್ಲಿರುವುದರಿಂದ ಹೇಳಬೇಕಾಗುತ್ತದೆ. ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಮುಂಗಾರು ಮಳೆಯಾಗಿರುವುದರಿಂದ ರಾಜ್ಯದ ಎಲ್ಲಾಕಡೆ ಬೆಳೆಯನ್ನು ಇಡತಕ್ಕಂತಹ ಕಾಲ. ಇದು ನಮಗೂ ಗೊತ್ತಿದೆ ತಮಗೂ ಗೊತ್ತಿದೆ. ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಕೇಂದ್ರ ಸರ್ಕಾರವೂ ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡಿದಮೇಲೆ ಮೂರುಕಟ್ಟಿಯಲ್ಲಿ ಗೊಬ್ಬರ ಸಿಕ್ಕುತ್ತಿಲ್ಲ. ಮೂರುಕಟ್ಟಿಯಲ್ಲಿ ಎಲ್ಲ ಪದಾರ್ಥಗಳೂ ಗಣನೀಯವಾಗಿ ಬೆಲೆಯಲ್ಲಿ ಹೆಚ್ಚಾಗಿವೆ. ೧೨೦೦ ರೂಪಾಯಿ ಇದ್ದುದನ್ನು ೨೦೦೦ ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಇದರಿಂದ ಸೊಸೈಟಿಯಲ್ಲಿ ಇದ್ದಂತಹ ಸ್ಟಾಕನ್ನು ಅಲ್ಲಿರತಕ್ಕಂತಹ ಕಾರ್ಯದರ್ಶಿ ಹಿಂದಿನ ತಾರೀಖಿನಲ್ಲಿ ಬಿಲ್ಲನ್ನು ಹಾಕಿ ಹೆಚ್ಚಿನ ದರದಲ್ಲಿ ಗೊಬ್ಬರವನ್ನು ಮಾರಾಟ ಮಾಡಿ ಹಣವನ್ನು ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಸರ್ಕಾರಕ್ಕೆ ಬಂದಿರುವ ಕಷ್ಟ ಏನು ಎಂದರೆ ಯಾವ ಯಾವ ಸೊಸೈಟಿಯಲ್ಲಿ ಎಷ್ಟೆಷ್ಟು ಗೊಬ್ಬರ ಸ್ಟಾಕಿದೆ ಎಂಬುದು ಗೊತ್ತಿಲ್ಲ. ನಮ್ಮವೇ ಸಂಸ್ಥೆಯಾದ ಆಗ್ರೋ ಇಂಡಸ್ಟ್ರೀಸ್‌ನಲ್ಲಿ ಎಷ್ಟು ಗೊಬ್ಬರ ಸ್ಟಾಕ್ ಇದೆ ಎಂಬುದೂ ಗೊತ್ತಿಲ್ಲ. ಇದರಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ ಹೇಗೆ ಆಡಳಿತ ನಡೆಯುತ್ತಿದೆ ಎಂಬುದು ನನಗಂತೂ ಗೊತ್ತಿಲ್ಲ. ಈಗ ಗೊಬ್ಬರದ ಬೆಲೆ ಜಾಸ್ತಿಯಾಗಿರುವುದರಿಂದ, ಅಧಿರತಕ್ಕಂತಹ ಸೊಸೈಟಿಯ ಕಾರ್ಯದರ್ಶಿ ಹಾಗೂ ಆಗ್ರೋ ಇಂಡಸ್ಟ್ರೀಸ್‌ನಲ್ಲಿರತಕ್ಕಂತಹ ಒಬ್ಬಗುಮಾಸ್ತ ಹಿಂದಿನ ತಾರೀಖಿನಲ್ಲಿ ರಸೀದಿಯನ್ನು ಹಾಕಿ ಹೆಚ್ಚು ಬೆಲೆಯನ್ನು ರೈತನಿಂದ ತೆಗೆದುಕೊಂಡು ಒಂದು ಕ್ವಿಂಟಾಲ್‌ಗೆ ೮೦೦ ರೂಪಾಯಿಯನ್ನು ಹೊಡೆಯುತ್ತಿದ್ದಾನೆ. ಆದ್ದರಿಂದ ಸರ್ಕಾರ ಈ ಬಗ್ಗೆ ವ್ಯವಸಾಯ ಇಲಾಖೆಯ ಡೈರೆಕ್ಟರನ್ನು ಕರೆಸಿ, ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ನ್ನು ಕರೆಸಿ, ಆಗ್ರೋ ಇಂಡಸ್ಟ್ರೀಸ್‌ನ ಮ್ಯಾನೇಜಿಂಗ್ ಡೈರೆಕ್ಟರನ್ನು ಕರೆಸಿ ಅವರ ಜೊತೆ ತಕ್ಷಣ ಚರ್ಚೆ ಮಾಡಿ. ಏನಾದರೂ ಒಂದು ತೀರ್ಮಾನ ಮಾಡಿ. ಇಲ್ಲದಿದ್ದರೆ ಸರ್ಕಾರಕ್ಕೆ ಬರತಕ್ಕಂತಹ ಹಣ ಹೋಗುತ್ತದೆ. ನೀವು ಹಾಕಿರತಕ್ಕಂತ ಹೆಚ್ಚುವರಿ ತೆರಿಗೆ ಇನ್ಯಾವಪನೋ ಅವರ ಪೆಟ್ಟಿಗೆಗೆ ಹೋಗುತ್ತಿದೆ. ಇನ್ನೊಂದು ರೈತನಿಗೆ ಪದಾರ್ಥಗಳೂ ಸಿಕ್ಕುವುದಿಲ್ಲ. ನಾಹಿತಿ ಇದ್ದರೆ ಈಗಲೇ ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ನಾಳೆಯಾದರೂ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ಮತ್ತೆ ರೈತರಿಗೆ ಗೊಬ್ಬರವನ್ನು ಕೊಡಿಸಿಕೊಡುವುದಕ್ಕೆ ಏನಾದರೂ ಪ್ರಯತ್ನವನ್ನು ಸರ್ಕಾರ ಮಾಡಬೇಕು.

ಅಧ್ಯಕ್ಷರು.—ಈ ಬಗ್ಗೆ ನನಗೆ ಇನ್ನೂ ಅನೇಕ ಸದಸ್ಯರಿಂದ ಗಮನ ಸೆಳೆಯುವ ಸೂಚನೆಗಳು ಬಂದಿವೆ. ಆದ್ದರಿಂದ ನೀವು ಯಾವಾಗ ವಿಷಯವನ್ನು ಅಜೆಂಡಾದಲ್ಲಿ ಸೇರಿಸಬೇಕೆಂದು ಹೇಳುತ್ತೀರೋ, ಆ ದಿವಸ ನಾನು ಆ ವಿಷಯವನ್ನು ಅಜೆಂಡಾದಲ್ಲಿ ಸೇರಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಸರ್ಕಾರಕ್ಕೂ ಸಾಕಷ್ಟು ವಿಚಾರಗಳು ಬಂದಿವೆ. ಇದರ ಬಗ್ಗೆ ಒಂದು ಸಮರ್ಪಕವಾದ ಹೇಳಿಕೆಯನ್ನು ಸರ್ಕಾರ ಬಹುಶಃ ೧೮ನೇ ತಾರೀಖು, ಅಂದು ನಾನು ಇರುವುದಿಲ್ಲ. ಅಂದು ದೆಹಲಿಯಲ್ಲಿ ರಾಜ್ಯಗಳ ವಿದ್ಯುಚ್ಛಕ್ತಿ ಮಂತ್ರಿಗಳ ಸಮ್ಮೇಳನ ಇದೆ. ಆದ್ದರಿಂದ ನಾನು ಆ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿರುವ್ದರಿಂದ ದೆಹಲಿಗೆ ಹೋಗುತ್ತಿದ್ದೇನೆ. ಅಂದು ನಾನು ಇರುವುದಿಲ್ಲ. ಆದರೂ ೧೮ನೇ ತಾರೀಖು ಬೆಳಗ್ಗೆ ಸರ್ಕಾರದ ಪರವಾಗಿ ಕಂದಾಯ ಮಂತ್ರಿಗಳೋ ಅಥವಾ ಅರ್ಥಮಂತ್ರಿಗಳೋ ಉತ್ತರ ಕೊಡುತ್ತಾರೆ. ಈ ಮಧ್ಯೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಿ, ಏನು ಮಾಡಿದ್ದೇವೆಂಬುದನ್ನೂ ಕೂಡ ೧೮ನೇ ತಾರೀಖು ಬುಧವಾರ ಹೇಳುತ್ತೇವೆ.

ಶ್ರೀ ಎಂ. ಎಂ. ಮಾಳಗಿ.—ಹುಬ್ಬಳ್ಳಿಯಲ್ಲಿ ಗುರುಶಾಂತಪ್ಪ, ಜೆಂಗಪ್ಪ ಚಲವಾದಿ ಎಂಬ ಪೋಲೀಸ್ ಪೇದೆ, ರಾತ್ರಿ ಸಮಯದಲ್ಲಿ ಗಸ್ತು ಕೆಲಸ ಮಾಡಿದ್ದಾನೆ. ಪುನಃ ಬೆಳಿಗ್ಗೆ ಆತನು ಮನೆಗೆ ಬರದಿದ್ದುದಕ್ಕೆ ಅವರ ಮನೆಯವರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಿಗೆ ತಿಳಿಸುವುದಕ್ಕೆ ಮುಂಚಿತವಾಗಿ ಆತನ ಶವ ಕೆರೆಯಲ್ಲಿ ಸಿಕ್ಕಿದೆ. ಇದಕ್ಕೆ ಕಾರಣವು ಯಾರು ? ಕೆರೆಯಲ್ಲಿ ಆತನ ಶವ ಸಿಗಬೇಕಾದರೆ ಏನು ಕಾರಣ ಎಂಬುದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು. ಈ ಬಗ್ಗೆ ನಾನು ನೋಟೀಸ್‌ನ್ನೂ ಸಹ ಕೊಟ್ಟಿದ್ದೇನೆ.

ಅಧ್ಯಕ್ಷರು.—ಇವತ್ತು ನೀವು ನೋಟೀಸ್‌ನ್ನು ಕೊಟ್ಟಿದ್ದೀರಿ. ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿಕೊಳ್ಳಬೇಕಲ್ಲ ;

SRI B. B. SAYANAK.—Mr. Speaker, Sir, last week I have given an adjournment motion regarding hike in fertilizers price. So far it has not come up before this House.

MR. SPEAKER —It will be taken up on 18th.

SRI B. B. SAYANAK.—I have also given a Call Attention Notice regarding a Scheduled Tribe boy whose legs and nose have been cut in Khanapur Taluka.

MR. SPEAKER.—I will examine it.

Disturbances in B. M .S College Engineering of Bangalore.

ಶ್ರೀ ಎಂ. ಚಂದ್ರಶೇಖರ್. (ಜಯನಗರ)—ಅಧ್ಯಕ್ಷರೆ, ಮೊನ್ನೆ ದಿವಸ ಬೆಂಗಳೂರಿನ ಬಿ. ಎಂ. ಎಸ್. ಎಂಜಿನಿಯರಿಂಗ್ ಕಾಲೇಜಿನಲ್ಲಿ ಭಾರತೀಯ ಹಾಗೂ ಇರಾನ್ ದೇಶದ ವಿದ್ಯಾರ್ಥಿಗಳ ನಡುವೆ ನಡೆದ ಘರ್ಷಣೆ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಕೇಳುತ್ತಿದ್ದೇನೆ, ಇನ್ನು ೪೦ ಜನ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಲಾಗಿದೆ. ಈ ರೀತಿ ದಾಂಧಲೆ ನಡೆದಾಗ ಮುಖ್ಯಮಂತ್ರಿಗಳು ವಿದ್ಯಾರ್ಥಿಗಳನ್ನಾಗಲೀ, ಪೋಲೀಸಿನವರನ್ನಾಗಲೀ ಕರೆಸಿ ಚರ್ಚೆ ಮಾಡುವುದು ಮುಖ್ಯ. ಅಲ್ಲಿ ಏನಾಗಿದೆಯೆಂದರೆ, ಪೋಲೀಸಿನವರು ಎಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್ ಕೊಠಡಿಗಳ ಒಳಕ್ಕೆ ನುಗ್ಗಿ ಜಖಂ ಮಾಡಿದ್ದರಿಂದ ನಮ್ಮ ವಿದ್ಯಾರ್ಥಿಗಳು ಕೋಪಗೊಂಡು ನಿನ್ನೆ, ಮೊನ್ನೆ ಎಂದರೆ ಶನಿವಾರ ಹಾಗೂ ಭಾನುವಾರ ಇರಾನ್ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿ ಆನಂತರ ಕಾಲೇಜಿಗೆ ಸೇರಿದ ಕಾರನ್ನು ಸುಟ್ಟಿದ್ದಾರೆ. ಇಲ್ಲಿ ಮುಖ್ಯವಾಗಿ ನಮ್ಮ ಭಾರತೀಯ ವಿದ್ಯಾರ್ಥಿಗಳ ಎಲ್ಲಿಯ ಸ್ಟೂಡೆಂಟ್ ಯೂನಿಯನ್ ಅಧ್ಯಕ್ಷ ಸಾಯಿರಾಂ ಎಂದು, ಅವರು ಕಾಂಗ್ರೆಸ್-ಐ ನ ವಿದ್ಯಾರ್ಥಿ ನಾಯಕರೆಂದು ಗೂತ್ತಾಗಿದೆ. ಅದೂಅಲ್ಲದೆ ಪೋಲೀಸ್ ಕಮಿಷನರ್ ಅವರೂ ಸಹಾ ಸರ್ಕಾರದ ಪ್ರತಿನಿಧಿ. ಈ ವಿದ್ಯಾರ್ಥಿ ನಾಯಕರನ್ನು ಹಾಗೂ ಪೋಲೀಸ್ ಕಮಿಷನರ್ ಇಬ್ಬರನ್ನೂ ಕರೆಸಿ ವಿಚಾರ ಮಾಡಲಿ ಈ ದಾಂಧಲೆಯಿಂದ ಬಹಳ ನಷ್ಟವಾಗುತ್ತಿದೆ. ಈ ಮಧ್ಯೆ ನಿನ್ನೆ ಇರಾನ್ ದೇಶದ ಪ್ರತಿನಿಧಿಯೊಬ್ಬರು ಕೈಗಾರಿಕಾ ವ್ಯವಹಾರದ ಬಗ್ಗೆ ಹೆಚ್. ಎಂ. ಟಿ. ಕಾರ್ಖಾನೆಗೆ ಭೇಟಿ ಕೊಟ್ಟು ಅವರು ಬೆಂಗಳೂರಿನಲ್ಲೆ ಇರುವಾಗ ಈ ದಾಂಧಲೆ ನಡೆದಿದೆ. ಈ ವಿಷಯ ಅವರಿಗೂ ತಿಳಿಯುತ್ತದೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಮಾನ್ಯಮುಖ್ಯಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು. ವಿದ್ಯಾರ್ಥಿ ಮುಖಂಡರನ್ನು ಪೋಲೀಸರನ್ನು, ಹಾಗೂ ಎಂಜಿನಿಯರಿಂಗ್ ಕಾಲೇಜ್ ಮೇನೇಜ್‌ಮೆಂಟ್‌ನ್ನು ಕರೆಸಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ. (ಯಲಹಂಕ)—ಮಾನ್ಯ ಅಧ್ಯಕ್ಷರೆ, ಇರಾನ್ ದೇಶದ ವಿದ್ಯಾರ್ಥಿಗಳು ಹಾಗೂ ನಮ್ಮ ದೇಶದ ವಿದ್ಯಾರ್ಥಿಗಳ ನಡುವೆ ಆಗಿಂದಾಗ್ಗೆ ಸಂಘರ್ಷಗಳು ನಡೆಯುತ್ತಿರುತ್ತವೆ ಹೋದಸಾರಿಯೂ ಇದೇ ರೀತಿ ಆಗಿದೆ. ಆನಂತರ, ಇರಾನ್ ದೇಶದ ರಾಯಭಾರಿಯವರ ಜೊತೆ ಮಾತನಾಡಿದ್ದು ಮಾನ್ಯ ಮುಖ್ಯಮಂತ್ರಿಯವರಿಗೂ ಸಹಾಯ ಗೊತ್ತಿದೆ. ಪುನಹಾ ಇದು ನೆನ್ನೆಯ ದಿವಸ ನಡೆದಿದೆ. ಎಂದರೆ ಇದನ್ನು ಶೈಶವಾವಸ್ಥೆಯಲ್ಲಿಯೇ ಹತೋಟಿಗೆ ತರದೇ ಹೋದರೆ, ಇದು ಸ್ಫೋಟಕವಾಗುತ್ತದೆ. ಇದು ಯಾವ ರೂಪವನ್ನು ತಾಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಅಧಿಕಾರ ವರ್ಗದವರೂ, ತಾವುಗಳೆಲ್ಲರೂ ಮತ್ತು ಯಾರು ವಿದ್ಯಾರ್ಥಿಗಳು ಇದಕ್ಕೆ ಜವಾಬ್ದಾರರಾಗಿದ್ದಾರೆ ಅವರುಗಳನ್ನು ಕರೆಸಿ ಮಾತನಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಇದು ಹತೋಟಿ ಮೀರಿದರೆ ಪುನ; ಪೋಸ್ಟಿ ಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ. ಆದರಲ್ಲೂ ಶ್ರೀಮಾನ್ ಗುಂಡೂರಾಯರು ಇದರ ಬಗ್ಗೆ ತೀವ್ರವಾದ ಗಮನವನ್ನು ಕೊಡಬೇಕು. ಇಲ್ಲಿ ಹಿಂದೆ ಲೂಟಿ ಮಾಡಿದ ವಸ್ತುಗಳನ್ನು ಪಾಪಸ್ ಕೊಡಲಾಗಿ, ಅದನ್ನು ಕೊಟ್ಟ